ಒಮ್ಮೊಮ್ಮೆ ಮೌಢ್ಯವೂ ತುಂಬಿಕೊಳ್ಳುತ್ತದೆ. ಅದು ಗ್ರಾಮದವರ ಬೌದ್ಧಿಕ ನಾಶಕ್ಕೆ ಕಾರಣವೂ ಆಗಿದೆ. ಸರಿ. ಸಿದರಾಯನಿಗೆ ಕೌಲು ಹಚ್ಚಿ ಹೊಲಮನಿ, ಬಿತ್ತಾಣ, ಮಾರಾಟ, ಮದ್ವಿ, ಮುಂಜಿವೆ, ಕೊನೆಗೆ ಯಾವ ವೈದ್ಯ ಮತ್ತು ಯಾವ ಆಸ್ಪತ್ರೆಗೆ ಹೋದರೆ ರೋಗ ಗುಣವಾದೀತು! ಎನ್ನುವುದರ ತನಕದ ದೇವರ ಮೇಲೆ ನಂಬುಗೆಯಿದೆ. ಪಾರವ್ವ ಒಮ್ಮೆ ಹಣದ ವಿಷಯವಾಗಿ ಕೌಲು ಹಚ್ಚಿದ್ದಳು. ಯಾವಾಗಲೂ ತಾಪತ್ರಯದಲ್ಲಿಯೇ ಮುಳುಗಿದಂತೆ ಇರುವ ರಾಜೀವನ ಬಳಿ ಹಣ ಇದೆಯೆಂದರೆ ಬಲಕೊಡು, ಇಲ್ಲಂದರೆ ಎಡ ಅಂದಿದ್ದಳು. ಬಲದ 'ಹೂ' ಬಿದ್ದು ಅವಳ ನಂಬುಕೆಯನ್ನು ದ್ವಿಗುಣಗೊಳಿಸಿತ್ತು. ಆದರೆ ವಾಸ್ತವದಲ್ಲಿ ಹಾಗಿರಲಿಲ್ಲ. ಬದುಕೇ ಹಾಗೆ ಸಂಕೀರ್ಣ! ಆತ ಅವಳಿಗೆ ಕಳಿಸಬೇಕಾದ ಹಣ ಕಳಿಸದೆ ಕಾಡಿಸುವಾಗ ಸಿದರಾಯ ಅವಳ ಬಲು ಆಸರೆಯ ವ್ಯಕಿಯಾಗುತ್ತಿದ್ದ.

ಆದರೆ ದೌರ್ಬಲ್ಯಗಳ ಮಧ್ಯೆಯೂ ವಿಕಲಾಂಗ ಅತ್ತೆಯನ್ನು ಒಪ್ಪುವ–ಒಪ್ಪದೆ ಇರುವ ಸೊಸೆಯರಲ್ಲಿ ಮಾನವ ಸಹಜ ಸಂಘರ್ಷಗಳು. ಅವು ಶಾಶ್ವತವೂ ಅಲ್ಲ ಮತ್ತು ತಾತ್ಕಾಲಿಕವೂ ಅಲ್ಲ ಎಂಬತಿರುತ್ತಿದ್ದವು. ಉದ್ಭವಗೊಂಡ ಜೀವನದ ಹೆಜ್ಜೆಗಳು. ತಿಳುವಳಿಕೆಯ ಅಸ್ಪಷ್ಟತೆಯ ಗ್ರಹಿಕೆಗಳು. ಗಂಡುಮಕ್ಕಳು ಮಾತ್ರಪರಿಸರದ ಕೈಗೊಂಬೆ.

***

ರುದ್ರಪ್ಪ ತೀರಿಹೋಗಿದ್ದಾರೆ. ಅವರು ಇನ್ನಿಲ್ಲವಾಗಿಯೇ ಹಲವು ಮಳೆ–ಬಿಸಿಲುಗಳು ಕಳೆದವು. ಸಹದೇವ ಮತ್ತು ಸಂಜೀವ ತಂದೆಯನ್ನು ನೋಡಿಕೊಂಡರು. ಇರುವ ತಾಯಿಯನ್ನು ಮಹಾದೇವ ಮತ್ತು ರಾಜೀವ ನೋಡಿಕೊಳ್ಳಬೇಕು. ನೋಡಿಕೊಳ್ಳುತ್ತಿದ್ದಾರೆ ಸಹ. ಒಪ್ಪಂದದಂತೆ. ಬದುಕು ಒಂದು ಒಪ್ಪಂದವಾಗಿರುವುದೂ ಸಹ ವಿಪರ್ಯಾಸ ಅಲ್ಲವೇ! ಆದರೆ ಇದು ಕಟುವಾಸ್ತವ. ಅವರ ಹೆಂಡಂದಿರು ಮತ್ತು ಪಾರವ್ವನ ನಡುವಿನ ಸಹಬಾಳ್ವೆಯ ಕೊರತೆ ವಿಶೇಷವಾಗಿ ಇವರಿಬ್ಬರನ್ನೂ ಕಾಡುತ್ತಿರುತ್ತದೆ. ಜನರೇಷನ್ ಗ್ಯಾಪ್ ಆಗಿರಲೂಬಹುದು. ತಲೆಮಾರುಗಳ ಸಾವಯವ ಸೇರುವಿಕೆಯ ಕೊರತೆಯಿರಬಹುದು.

ಆಫೀಸಿನಿಂದ ಬಂದ ಮಹಾದೇವನಿಗೆ ಹೆಂಡತಿ ರೂಪಾ ಪಾರವ್ವನನ್ನು ನಡೆದಾಡಿಸಲು ಸಹಾಯ ಮಾಡುತ್ತಿದ್ದಳು. ಬಿಸಿ ಬಿಸಿ ಅಡುಗೆ ಮಾಡಿ ಬಡಿಸುತ್ತಿದ್ದಳು. ಶಾಲೆಗೆ ಮಕ್ಕಳನ್ನು ಸಿದ್ಧಪಡಿಸಿ ಕಳಿಸುತ್ತಿದ್ದಳು. ಏತನ್ಮಧ್ಯೆ ಅವರೀರ್ವರಲ್ಲಿ ಚಿಕ್ಕಪುಟ್ಟ ಘರ್ಷಣೆಗಳೂ ಜರುಗುತ್ತಿದ್ದವು. ಅದನ್ನು ಆತ ನಿರ್ಲಕ್ಷ್ಯ ಮಾಡಿ ನಿರುಮ್ಮಳವಾಗಿರುತ್ತಿದ್ದ. ಅದಕ್ಕೆ ಕೆಲವು ಜೆನ್ಯೂನ್ ಆದ ರೀಜನ್‌ಗಳಿರುತ್ತಿದ್ದವು. ಬರಬರುತ್ತ ಪಾರವ್ವ ವಾಕರ್ ಸಹಾಯದಿದಂದ ನಡೆಯಹತ್ತಿದಳು. ಹೀಗೆಯೇ ಐದಾರು ವರುಷ ಸವೆಯಿತು.

ಒಂದು ದಿನ ಮುಂಜೆ ಮುಂಜಾನೆ ಪಾರವ್ವ ''ನಿನ್ನ ಒಬ್ಬನ ಹಡೆದಿಲ್ಲ. ನನಗ ಅಥಣಿಗಿ ಬಿಟ್ಟ ಬಾ. ಅಂವೂ ಮಗಾನ, ಹೀಂಗ ಬಿಟ್ಟರ ನಿನ್ನೊಬ್ಬನ ಮ್ಯಾಲ ಹಾಕಿ ಮಸ್ತ ಆರಾಮ ಇರತಾರ. ಅವನ ಹಂತ್ಯಾಕಿರತ್ಯಾನ,ನಡಿ ಬಿಟ್ಟ ಬರಬಾ...'' ಅಂದಳು.

ಮಹಾದೇವ ಸಮಾಧಾನದಿಂದ, ''ಆಕಿ ಯಾನಾರ ಅಂದಳ್ಯಾನ? ನಾ ಹೇಳತ್ಯಾನ'' ಅಂದ. ಅದಕ್ಕೆ ತಟ್ಟನೆ ಪಾರವ್ವ, ''ಅತ್ತಿ ಸೊಸಿ ಅಂದರ ಒಂದ ಗೇನು ಅತ್ತ, ಒಂದ ಗೇನು ಇತ್ತ ಇರತೈತಿ... ಅದ ನಡ್ಯೋದನ. ನನಗೂ ಜಾಗಾ ಬದಲಿಸಿದಂಗ ಆಕ್ಕೇತಿ'' ಅಂದಳು. ಮಹಾದೇವ ರಾಜೀವಗೆ ಕರೆದುಕೊಂಡು ಹೋಗಲು ಹೇಳಿದ. ಹಾಗೆ ನೋಡಿದರೆ ಅವರೆಲ್ಲ ಚಿಕ್ಕವರಿದ್ದಾಗ ಪಾರವ್ವ ಬಹಳ ಕಕ್ಕುಲಾತಿಯಿಂದ ಹೇಳುತ್ತಿದ್ದಳು. ನನ್ನ ಮುಪ್ಪಿನತನದಾಗ ಖರೆ ನೋಡಾಂವ ಅಂದರ ನನ ರಾಜೀವನ... ಎಂದು. ಅದಕ್ಕೆ ಪಾರವ್ವಗೆ ಅಲ್ಲಿ ಹೋಗಲು ಕಾರಣ ಇದ್ದಿರಬಹುದು. ಇರದಿಲೂಬಹುದು. ಆದರೆ ಅಲ್ಲಿಯೂ ಆಕೆ ಬಹಳ ದಿನಗಳನ್ನು ಕಳೆಯಲಿಲ್ಲ. ರಾಜೀವನ ಬದುಕಿನ ಅರಿವಿನ ವಿಸ್ತಾರ ದೊಡ್ಡದಾಗಿರಲಿಲ್ಲ. ಎಪ್ಪತ್ತರ ಆಚೀಚೆ ಇರುವವರ ಮನೋರಂಗವ ಅರಿತು ಹೆಜ್ಜೆಯಿಡುವ ತಿಳುವಳಿಕೆಯ ಬಹುದೊಡ್ಡ ಕೊರತೆ ಅವನಲ್ಲಿತ್ತು. ಆತ ಮತ್ತು ಆತನ ಮಡದಿ ಸುರೇಖಾ ಪಾರವ್ವನ ಮೇಲೆ ವಿಶಿಷ್ಟ ಪ್ರಯೋಗ ಮಾಡತೊಡಗಿದರು.

ರಾಜೀವ ಒಬ್ಬ ಸನಾತನ ಯೋಗಿಯ ಭಕ್ತನಾಗಿದ್ದ. ಆ ಯೋಗಿ ಹೇಳಿದ್ದನ್ನೆಲ್ಲ ಚಾಚೂ ತಪ್ಪದೇ ಪಾಲಿಸುತ್ತಿದ್ದ. ರಾಜೀವ ಆಹಾರದ ಮೇಲೆ ಪ್ರಯೋಗಗಳನ್ನು ಮಾಡತೊಡಗಿದ. ಅದನ್ನು ತನ್ನ ಪುಟ್ಟ ಮಗನನ್ನು ಹೊರತುಪಡಿಸಿ ಇಡೀ ಕುಟುಂಬದ ಮೇಲೆ ಬಳಸಹತ್ತಿದ. ಇಷ್ಟಿಷ್ಟೇ, ಇಂಥದ್ದೆ, ಇಂಥ ನಿರ್ದಿಷ್ಟ ಸಮಯಕ್ಕೆ ತಿನ್ನುವುದೆಂದು ನಿಯಮ ಮಾಡಿದ. ಅದನ್ನು ಪಾರವ್ವನ ಮೇಲೆಯೂ ಪ್ರಯೋಗ ನಡೆಸಿದ. ಆಕೆ ರೈತಾಪಿ ಹೆಣ್ಮಗಳು. ಹೈನುಂಡು ಬದುಕಿದಾಕೆ. ಕೇಳಿಯಾಳೆ! ಆದರೆ ಆತ ಸಂಘಟನೆಯ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದ.

ಮಹಾದೇವಗೆ ಹೊಸ ತಲೆನೋವೊಂದು ಆರಂಭವಾಯಿತು. ಯಾವುದೇ ಸಂಘಟನೆಗಳಲ್ಲಿ ಗುರುತಿಸಿಕೊಳ್ಳಬೇಡ ಎಂದು ಎಷ್ಟು ತಿಳಿಹೇಳಿದರೂ ಕೇಳುತ್ತಿರಲಿಲ್ಲ. ಅದ ಬಿಟ್ಟು ಆತ ಅವನ ಮೇಲೆಯೇ ಪ್ರಭಾವಿಸುವ ಮಾತು ಆಡತೊಡಗಿದ. ಅಲ್ಲಿ ಪಾಲ್ಗೊಳ್ಳುವುದರಿಂದ ಪಾರವ್ವನ ನಡೆದಾಟವೂ ನಿಂತಿತು. ಹೀಗಾಗಿ ಆಕೆ ಮತ್ತಷ್ಟು ಕುಗ್ಗಿ ಹೋದಳು. ಆರೋಗ್ಯ ಹದಗೆಡಹತ್ತಿತು. ಮಹಾದೇವನಿಗೆ ಒಂದಿನ ಪಾರವ್ವ ಫೋನ್ ಮಾಡಿದಳು. ನನ್ನನ್ನ ನನ್ನ ಊರಿಗೆ ಬಿಟ್ಟುಬಿಡಪ್ಪ... ರಾಜೀವನೂ ಬ್ಯಾಡ, ಮಾದೇವನೂ ಬ್ಯಾಡ... ನಾ ನನ್ನ ಗಂಡನ ಮನ್ಯಾಗಿರತ್ಯಾನ... ಸಾವ ಆದರ ಅಲ್ಲೇ ಆಗಲಿ... ಮತ್ತೆ ಸಿದರಾಯನ ಪಾಂಡರಿಗೆ ಬಂದಳು. ಸಿದರಾಯನ ಪೂಜೆಯ ಗಂಟೆಯ ನಾದ, ನಗಾರಿಯ ನುಡಿಕೆಯ ಅವಳ ಶಕುತಿಯೇನೋ! ಎಂಬಂತೆ ಇರತೊಡಗಿದಳು.

***

ಮಟಮಟ ಮಧ್ಯಾಹ್ನ... ಪಾರವ್ವ ತನ್ನ ಕೋಣೆಯಲ್ಲಿ ಏಕಾಂಗಿ. ಬಿಸಿಲು ಕೋಲುಗಳು ನೇರ ರಂಗದ ಮೇಲಿನ ಸ್ಪಾಟ್ ಲೈಟಿನಂತೆ ಇಳಿಬಿದ್ದಿದ್ದವು! ಸಣ್ಣಗೆ ಹಬೆಯಾಡುತ್ತಿತ್ತು. ಅದರ ಒಂದು ಬಿಸಿಲ ಕೋಲಲ್ಲಿ ಆಕೆಯ ಗಂಡ ರುದ್ರಪ್ಪ ತೇಲುತ ಬಂದ. ಬಿಳಿ ಶುಭ್ರ ನೆಹರುಶರ್ಟ, ಬಿಳಿ ಧೋತರ ಮತ್ತು ಬಿಳಿ ಪಟಿಗೆ ಧರಿಸಿದ್ದ. ''ಅರೆ ಕಾರಬಾರ್ತ್ಯಾ ಯಾಕ ಬಂತೋ...'' ಅಚ್ಚರಿಯಿಂದ ಪುಟಪುಟಿಸಿದಳು.

''ಪಾರಿ... ನೀನಿಲ್ಲಿ ಇರಬ್ಯಾಡ, ನನ್ನ ಸಂಗಾಟ ಬಾ. ಇವು ನಿನ್ನ ಛಲೊ ನೋಡಕೋದಿಲ್ಲ ಬಾ. ಅವರು... ಅವರ ಹೆಂಡರು, ಮಕ್ಕಳು.. ಅವರ ಮೊಬೈಲು, ಅವರ ಟಿವಿ... ಛಲೊದಂಗ ಇರಲಿ ಬಾ. ಅವು ಛಲೊದಂಗ ಬಾಳೇ ಮಾಡಲಿ ಅಂತನ, ನಮ್ಮ ಪಾಲಿನ ಹೊಲಮನಿ ಕೊಟ್ಟೆವು ಅಲ್ಲ. ಆದರ ನಾ ಹ್ವಾದ ಮ್ಯಾಲ ನಿನ್ನ ಹಲ್ಲವನವೇಸ ಭಾಳ ಆತು. ಇನ್ನೂ ಕಾಲ ಮುರಕೊಂಡ ಕೋಳಿ



ಹಂಗ ನೀ ಅಲ್ಲಿ ಬಿದ್ದಿರೋದು ನನಗ ನೋಡೋಕ ಆಗೋದಿಲ್ಲ. ಬಾ...'' ರುದ್ರಪ್ಪ ಪಿರುತಿಯಿಂದ ಕರೆದ.

''ನಾ ಮೊಮ್ಮಕ್ಕಳ ಮದುವಿನಾದರೂ ನೋಡಿ ಬರತೀನಲ್ಲ! ಅದೊಂದು ಆಸೆ ಐತ್ಯೋ ಕಾರಬಾರಿ... ಕಡೆ ಪಕ್ಷ ಒಬ್ಬಾಕಿದನಾದರೂ ಮದ್ವಿ ನೋಡಬೇಕೋ...'' ಗೋಗರೆದು ಆಸೆ ವ್ಯಕ್ತಪಡಿಸಿದಳು. ಆಕೆಯ ಕಣ್ಣುಗಳು ಹಸಿಯಾಗಿದ್ದವು. ಅವಳು ಮಹಾದೇವನಿಗೆ ಈ ಆಸೆಯನ್ನು ಹಲವು ಸಾರೆ ವ್ಯಕ್ತಪಡಿಸಿದ್ದಳು. ಹಾಗೆ ಹೇಳಿದಾಗಲೆಲ್ಲ ಆತನಿಗೆ ಕಸಿವಿಸಿಯಾಗುತ್ತಿತ್ತು.

ರುದ್ರಪ್ಪ, ''ಈ ಆಸೆಗೊಳಿಗಿ ಸೀಮಿಲ್ಲ. ಅವು ಹಂಗ ಆಕಾಶದಷ್ಟ ಬೆಳಿತಾವು, ಹರವುತಾವು... ಬಾ...'' ಅಂದ.

''ಹಂಗಂತಿ... ನನಗೂ ಈ ಹೇಲುಚ್ಚಿ, ಈ ವಾಸನಿ... ಈ ಧಗಧಗಿ, ಎಲ್ಲ ಸಾಕಾಗೇತಿ. ಈ ಅಟಾಟಗಳಿಂದ ದೂರ ಹೋಗಿಬಿಡೋಣು. ನಡಿ ಬಂದೆ'' ಎಂದು ಮಂಚದಿಂದ ಎದ್ದವಳು ಬಿಸಿಲುಕೋಲಲ್ಲಿ ಕಾರಬಾರಿ ಜತೆಗೆ ಕರಗಿದಳು.

ಮಹಾದೇವ ಸೆಲ್ ಫೋನಿನ ರಿಂಗ್ ಟೋನ್‌ಗೆ ಬೆಚ್ಚಿಬಿದ್ದು ನಿದ್ದೆಯಿಂದ ಎದ್ದ. ಪಾರವ್ವನ ಫೋನ್ ಕಾಲ್ ಇತ್ತು.